# ಮೀನ ಹೆಜ್ಜೆ

ಕವಿತೆ
ಹರಿವ ನದಿ
ಆಳಕ್ಕೆ ಗಾಳ
ಹೂಡಿ ಕೂತವನಿಗೆ
ಸಿಗಬಹುದಾದ ಮೀನು

ಅಂದಾಜಿಗೇ ಸಿಗುವುದಿಲ್ಲ
ಮೀನ ಹೆಜ್ಜೆ ಆಳ ಹರವು
ಸತಾಯಿಸಿ ಗಾಳ ಎರೆ
ಸಮಯ ತಿನ್ನುತ್ತವೆ
ಮಳ್ಳಿ ಮೀನುಗಳು

ಬಳುಕಿ ಬಾಗುವ ಮೀನು
ಮಿಂಚಿ ಮರೆಯಾಗಿ
ಮೌನ ಚಿಮ್ಮಿಸುತ್ತವೆ
ಸಹನೆ ಪರೀಕ್ಷೆ
ದಾರದ ತುದಿಯಲ್ಲಿ
ಬರಿಗೈಯಲ್ಲೇ
ಬಂದ ದಾರಿ ತೋರಿಸುತ್ತವೆ

ಬಲೆ ಬೀಸಿಯೂ
ಹಿಡಿಯಬಹುದು
ಅದು ವ್ಯಾಪಾರ

ಅಪರೂಪಕ್ಕೆ
ಗಾಳ ಬೀಳುವುದೇ ತಡ
ಸಾಲು ಸಾಲಾಗಿ ಮುತ್ತುತ್ತವೆ
ಅಳತೆ ಮೀರಿದ ಮೀನಾದರೆ
ಗಾಳ ಉಳಿಯುವುದೇ ಹೆಚ್ಚು

ಸಿಕ್ಕಮೀನಿಗೆ ಉಪ್ಪು ಖಾರ
ಸವರಿ ವಿಧ ವಿಧ ಹದವಾಗಿ
ಬೇಯಿಸಿ ಘಮಗುಟ್ಟಿಸಿ
ಉಣಬಡಿಸುವುದು
ರಸಃ ಸಿದ್ಧಿ

ಉಣ್ಣುವವರು
ಗಂಟಲಿಗೆ ಮುಳ್ಳು
ಚುಚ್ಚದಂತೆ ಮೀನು
ತಿನ್ನುವುದು ಇನ್ನೊಂದು ಕಲೆ

● ಹಂದಲಗೆರೆ ಗಿರೀಶ್

